# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

FTS No. 13171100

ನಿಗಮ ಕಾರ್ಯಾಲಯ,
ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು – 560 009

ಸಂಖ್ಯೆ: ಕವಿಪ್ರನಿನಿ/ವ್ಯನಿ/ಹಿಆಕಾ/19–20/143

ದಿನಾಂಕ: 18.12.2019.

**ಟಿಪ್ಪಣಿ**

ವಿಷಯ: ನಿಗಮದ ನಿರ್ದೇಶಕರುಗಳು ಹಾಗೂ ಇತರೆ ಅಧಿಕಾರಿಗಳು/ನೌಕರರು ಪ್ರವಾಸದ ನಿಮಿತ್ತ ಅಥವಾ ಇತರೆ ಸಂದರ್ಭಗಳಲ್ಲಿ ಕೇಂದ್ರ ಸ್ಥಾನ ಬಿಡುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದ ನಿರ್ದೇಶಕರುಗಳು ಹಾಗೂ ಇತರೆ ಅಧಿಕಾರಿಗಳು/ನೌಕರರು ಪ್ರವಾಸದ ನಿಮಿತ್ತ ಅಥವಾ ಇತರೆ ಸಂದರ್ಭಗಳಲ್ಲಿ ಕೇಂದ್ರ ಸ್ಥಾನ ಬಿಡುವ ಮೊದಲು ಈ ಕೆಳಗಿನಂತೆ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದು ಪ್ರವಾಸವನ್ನು ಕೈಗೊಳ್ಳಲು ಸೂಚಿಸಿದೆ.

- ನಿಗಮದ ಎಲ್ಲಾ ನಿರ್ದೇಶಕರುಗಳು ಪ್ರವಾಸದ ನಿಮಿತ್ತ ಅಥವಾ ಇತರೆ ಸಂದರ್ಭಗಳಲ್ಲಿ ಕೇಂದ್ರ ಸ್ಥಾನ ಬಿಡುವ ಮೊದಲು ವ್ಯವಸ್ಥಾಪಕ ನಿರ್ದೇಶಕರಿಂದ ಮುಂಚಿತವಾಗಿ ಅನುಮೋದನೆ ಪಡೆಯುವುದು.

- ಅಧಿಕಾರಿಗಳು/ನೌಕರರು ಹೊರ ರಾಜ್ಯಗಳಿಗೆ ಪ್ರವಾಸ ಕೈಗೊಳ್ಳುವ ಮೊದಲು ವ್ಯವಸ್ಥಾಪಕ ನಿರ್ದೇಶಕರಿಂದ ಮುಂಚಿತವಾಗಿ ಅನುಮೋದನೆ ಪಡೆಯುವುದು.

- ಉಳಿದಂತೆ ಹಾಲಿ ಇರುವ ನಿಬಂಧನೆಗಳಂತೆ ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯುವುದು.

ವ್ಯವಸ್ಥಾಪಕ ನಿರ್ದೇಶಕರು,
ಕವಿಪ್ರನಿನಿ, ಬೆಂಗಳೂರು.

ಪ್ರತಿ:

1. ಎಲ್ಲಾ ನಿರ್ದೇಶಕರುಗಳು, ಕವಿಪ್ರನಿನಿ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರುಗಳು, ಕವಿಪ್ರನಿನಿ
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ, ಬೆಂಗಳೂರು.